# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**- 2014-15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

**<u>ಪ್ರಸ್ತಾವನೆ:</u>**

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿ ವ್ಯವಸ್ಥೆ ಒಂದಾಗಿದ್ದು, ನಗರಾಭಿವೃದ್ಧಿ ಇಲಾಖಾವತಿಯಿಂದ ಅನೇಕ ಯೋಜನೆಗಳಡಿ ಬಡ ನಾಗರೀಕರಿಗೆ ಮನೆ ಹಾಗೂ ನಿವೇಶನಗಳನ್ನು ಒದಗಿಸಲಾಗುತ್ತಿದ್ದರೂ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅತ್ಯಂತ ಅನೈರ್ಮಲ್ಯ ವಾತಾವರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ಲೋಡರ್ಸ್, ಯು.ಜಿ.ಡಿ. ಹೆಲ್ಪರ್ಸ್ ಮತ್ತು ಕ್ಲೀನರ್ಸ್ ಇವರುಗಳಿಗೆ ವಸತಿ ಯೋಜನೆಗಳಡಿಯಲ್ಲಿ ನಿಯಮಾನುಸಾರ ಸೌಲಭ್ಯಗಳನ್ನು ಪಡೆಯುವುದು ಸಾಧ್ಯವಾಗುತ್ತಿಲ್ಲ. ಸಾಮಾಜಿಕ ವ್ಯವಸ್ಥೆ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ಬಹುಪಾಲು ಪೌರಕಾರ್ಮಿಕರು ತಮ್ಮದೇ ಆದ ವಸತಿ ಗೃಹಗಳನ್ನು ನಿರ್ಮಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ.

ರಾಜ್ಯದಲ್ಲಿ ಹಾಲಿ 11,438 ಖಾಯಂ ಪೌರಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು, ಸದರಿ ಪೌರಕಾರ್ಮಿಕರಿಗೆ ಅವಶ್ಯವಿರುವ ವಸತಿ ಸೌಕರ್ಯವನ್ನು ಕಲ್ಪಿಸಲು ಇಂದಿನ ದಿನಗಳಲ್ಲಿ ಸ್ಥಳದ ಅಭಾವದ ಕಾರಣಗಳಿಂದ, ಲಭ್ಯವಿರುವ ಸ್ಥಳಗಳನ್ನು ಗರಿಷ್ಠ ಮಟ್ಟದಲ್ಲಿ ಉಪಯೋಗಿಸಿಕೊಂಡು ಖಾಯಂ ಪೌರಕಾರ್ಮಿಕರಿಗೆ ಬಹುಮಹಡಿ ವಸತಿ ಸಮುಚ್ಛಯಗಳಲ್ಲಿ ಸಮುದಾಯಿಕ ಅವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು, ಕುಡಿಯುವ ನೀರು, ವಿದ್ಯುತ್, ಆಟದ ಮೈದಾನ, ಶಾಲೆ, ಉದ್ಯಾನವನ, ಸಮುದಾಯ ಭವನ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ನೀಡುವುದರೊಂದಿಗೆ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಸೌಲಭ್ಯಗಳನ್ನು ನೀಡಬೇಕಾದಲ್ಲಿ ಇಂದಿನ ಮಾರುಕಟ್ಟೆ ದರದಲ್ಲಿ ಸರಾಸರಿ ಪ್ರತಿ ಮನೆಗೆ ಸುಮಾರು ರೂ.16.00 ಲಕ್ಷಗಳಾಗಬಹುದೆಂದು ಅಂದಾಜಿಸಲಾಗಿದೆ. ಆದ್ದರಿಂದ, ವಸತಿ ಗೃಹದ ಮೌಲ್ಯವು ಅತ್ಯಂತ ದುಬಾರಿಯಾಗಲಿದ್ದು, ಪೌರಕಾರ್ಮಿಕರು ಸದರಿ ಬೆಲೆಯನ್ನು ಪಾವತಿಸಲು ಆರ್ಥಿಕವಾಗಿ ಅಸಮರ್ಥರಾಗಿರುವ ಕಾರಣದಿಂದ ವಾಸಯೋಗ್ಯ ವಸತಿ ಗೃಹ ನಿರ್ಮಾಣ ವೆಚ್ಚವನ್ನು ಹೊರತುಪಡಿಸಿ, ಇತರೆ ಎಲ್ಲಾ ಸಮುದಾಯಿಕ ಮೂಲಭೂತ ಸೌಲಭ್ಯಗಳ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರದಿಂದಲೇ ಭರಿಸಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ ಸೇವೆಯಲ್ಲಿರುವ ಮತ್ತು ಸ್ವಂತ ವಸತಿ ಸೌಲಭ್ಯವನ್ನು ಹೊಂದದೇ ಇರುವ ಪೌರಕಾರ್ಮಿಕರಿಗೆ ವಸತಿ ಸೌಲಭ್ಯವನ್ನು ಒದಗಿಸಲು ರಾಜ್ಯ ಸರ್ಕಾರವು 2014-15ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 3604-00-192-0-10 ರಲ್ಲಿ ಪೌರಕಾರ್ಮಿಕರ ವಸತಿ ಉದ್ದೇಶಕ್ಕಾಗಿ ರೂ. 25.00 ಕೋಟಿಗಳನ್ನು ನಿಗಧಿಪಡಿಸಲಾಗಿದೆ. ಈ ವಸತಿ ಯೋಜನೆಯಡಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಸತಿ ರಹಿತ ಖಾಯಂ ಲೋಡರ್ಸ್, ಯು.ಜಿ.ಡಿ. ಹೆಲ್ಪರ್ಸ್ ಮತ್ತು ಕ್ಲೀನರ್ಸ್ ಪೌರಕಾರ್ಮಿಕರುಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಉದ್ದೇಶಿಸಿ, ಈ ಕೆಳಕಂಡಂತೆ ಆದೇಶಸಲಾಗಿದೆ.

ADD

9/2

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 287 ಎಸ್‌ಎಫ್‌ಸಿ 2014</u>**

**<u>ಬೆಂಗಳೂರು, ದಿನಾಂಕ: 06 -02-2015.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ವಾಸಯೋಗ್ಯ ವಸತಿ ಸೌಲಭ್ಯವನ್ನು ಕಲ್ಪಿಸುವ **"ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ"**ಗೆ ಈ ಕೆಳಕಂಡಂತೆ ಅನುಮೋದನೆ ನೀಡಿದೆ.

**(1) "ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ"ಯಡಿ ಫಲಾನುಭವಿಗಳು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರತಕ್ಕದ್ದು:-**

- ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ ಸೇವೆಯಲ್ಲಿದ್ದು, ಕನಿಷ್ಠ 10 ರಿಂದ 15 ವರ್ಷಗಳ ಸೇವೆ ಸಲ್ಲಿಸಿರಬೇಕು.
- ಒಂದು ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚು ಪೌರಕಾರ್ಮಿಕರುಗಳಿದ್ದಲ್ಲಿ ಅವರುಗಳಿಗೆ ಒಂದೇ ಮನೆಯನ್ನು ನೀಡಲಾಗುವುದು.
- ಪೌರಕಾರ್ಮಿಕ ಅಥವಾ ಅವನ ಕುಟುಂಬದ ಸದಸ್ಯರು ರಾಜ್ಯದ ಯಾವುದೇ ಸ್ಥಳದಲ್ಲಿ ಸ್ವಂತ ಮನೆ (ಪಕ್ಕಾಮನೆ, ಆರ್‌ಸಿಸಿ ಮನೆಗಳನ್ನು) ಹೊಂದಿರಬಾರದು, ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಧೃಡೀಕರಣ ಸಲ್ಲಿಸತಕ್ಕದ್ದು.
- ಪೌರಕಾರ್ಮಿಕರ ನಿವೃತ್ತಿ ಅವಧಿಯು 5 ವರ್ಷಗಳಿಗಿಂತ ಕಡಿಮೆ ಇದ್ದಲ್ಲಿ ಬಾಕಿ ಮೊತ್ತವನ್ನು retirement benefit ನಿಂದ ದೊರೆಯುವ ಮೊತ್ತದಿಂದ ಭರಿಸತಕ್ಕದ್ದು.
- ವಸತಿ ರಹಿತ ಪೌರಕಾರ್ಮಿಕರು ಗುಡಿಸಲು / ಕಚ್ಚಾ ಮನೆಗಳಲ್ಲಿ / ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದರೆ ಅಂತಹವರನ್ನು ಫಲಾನುಭವಿಗಳಾಗಿ ಆದ್ಯತೆ ಮೇಲೆ ಪರಿಗಣಿಸತಕ್ಕದು.

**(2) ಭೂಮಿ / ನಿವೇಶನದ ಲಭ್ಯತೆ:-**

"ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ"ಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ಭೂಮಿ / ನಿವೇಶನದ ಆಧಾರದ ಮೇಲೆ ಅನುಷ್ಠಾನಗೊಳಿಸುವುದು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿವೇಶನದ ಲಭ್ಯತೆ ಕಷ್ಟವಾಗಿರುವ ಸಂದರ್ಭಗಳಲ್ಲಿ ಸ್ಥಳೀಯ ಸಂಸ್ಥೆಗಳು ಭೂಮಿಯನ್ನು ಖರೀದಿಸಿ ನೀಡುವುದು.

**(3) ಮನೆಯ ವಿಸ್ತೀರ್ಣ:-**

ಈ ಯೋಜನೆಯಡಿಯಲ್ಲಿ ಗರಿಷ್ಠ 500 ಚದರ ಅಡಿಗೆ ಮೀರದಂತೆ ಬಹುಮಹಡಿ ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುತ್ತದೆ. ಈ ಯೋಜನೆಯಡಿ ಪೌರಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಗೊಳಿಸುವ ಸಲುವಾಗಿ 500 ಚದರಡಿ ವಿಸ್ತೀರ್ಣದ ವಸತಿ ಗೃಹವನ್ನು ನೀಡಲು ಉದ್ದೇಶಿಸಲಾಗಿದೆ. ಆರ್ಥಿಕ ವೆಚ್ಚದಲ್ಲಿ ಮಿತವ್ಯಯಗೊಳಿಸಲು ಪ್ರಸ್ತುತ ಒಂದು ನಗರಸ್ಥಳೀಯ ಸಂಸ್ಥೆಯಲ್ಲಿ ಲಭ್ಯವಿರುವ ನಿವೇಶನದಲ್ಲಿ G+3 ಮಹಡಿ ಮನೆಗಳಂತೆ, ಪ್ರತಿ ಅಂತಸ್ತಿನಲ್ಲಿ 4 ಮನೆಗಳನ್ನು ನಿರ್ಮಿಸಲಾಗುತ್ತದೆ. ಆದ್ದರಿಂದ, ಮೊದಲ ಹಂತದಲ್ಲಿ ಒಂದು ನಗರಸ್ಥಳೀಯ ಸಂಸ್ಥೆಯಲ್ಲಿ "ಗೃಹಭಾಗ್ಯ ಯೋಜನೆ"ಯನ್ನು ಅನುಷ್ಠಾನಗೊಳಿಸಲು ಕನಿಷ್ಠ 12 ಅರ್ಹ ಪೌರಕಾರ್ಮಿಕರು ಲಭ್ಯವಿದ್ದಲ್ಲಿ, ಆ ನಗರ ಸ್ಥಳೀಯ ಸಂಸ್ಥೆಯಲ್ಲಿ ಯೋಜನೆಯನ್ನು ಆಧ್ಯತೆಯ ಮೇಲೆ ಅನುಷ್ಟಾನಗೊಳಿಸತಕ್ಕದ್ದು.

**(4) ಸ್ವಂತ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸುವುದು :-**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿವೇಶನದ ಲಭ್ಯತೆ ಇಲ್ಲದಿರುವ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳು ಭೂಮಿಯನ್ನು ಖರೀದಿಸಿ ನೀಡುವಲ್ಲಿ ಸಾಧ್ಯವಾಗದಿದ್ದಾಗ, ಪೌರಕಾರ್ಮಿಕರು ಸ್ವಂತ ನಿವೇಶನ ಹೊಂದಿದ್ದಲ್ಲಿ, ಸ್ಥಳೀಯ ಸಂಸ್ಥೆಗಳ ವತಿಯಿಂದ ವಸತಿ ಗೃಹವನ್ನು ನಿರ್ಮಿಸಿಕೊಡತಕ್ಕದ್ದು, ಹಾಗೂ ಈ ರೀತಿ ನಿರ್ಮಿಸಬಹುದಾದ ಮನೆಗಳ ನಕ್ಷೆಯನ್ನು ಅಲ್ಲಿಯ ಭೌಗೋಳಿಕ ಸನ್ನಿವೇಶಕ್ಕೆ ತಕ್ಕಂತೆ ಸರ್ಕಾರವೇ ನಿಗದಿ ಮಾಡುತ್ತದೆ.

**(5) ನಿರ್ಮಾಣ ವೆಚ್ಚದ ಶೇಕಡ 20 ರಷ್ಟನ್ನು ಪೌರಕಾರ್ಮಿಕರು ಭರಿಸುವುದು :-**

ಪೌರಕಾರ್ಮಿಕರಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ನಿವೇಶನಗಳಲ್ಲಿ 500 ಚದರ ಮನೆಗಳನ್ನು ರೂ.7.50 ಲಕ್ಷಗಳ ಅಂದಾಜಿನಲ್ಲಿ ನಿರ್ಮಾಣ ಮಾಡಿಕೊಟ್ಟಾಗ ಶೇಕಡ 20 ರಷ್ಟು ಮೊತ್ತವನ್ನು ಫಲಾನುಭವಿ ನೌಕರನು ತನ್ನ ಸ್ವಂತ ವೇತನದಿಂದ ಬ್ಯಾಂಕ್ ಮೂಲಕ ಸಾಲ

ಪಡೆದು ನೀಡಬೇಕು, ಸದರಿ ಸೌಲಭ್ಯವನ್ನು ಈ ಕೆಳಗಿನ ಪ್ರಕಾರ ಸುಲಭ ಕಂತುಗಳಲ್ಲಿ ಬ್ಯಾಂಕಿಗೆ ಮರುಪಾವತಿ ಮಾಡತಕ್ಕದ್ದು.

(ಮೊತ್ತ ರೂ. ಗಳಲ್ಲಿ)

| ಪೌರಕಾರ್ಮಿಕರ 25% ವಂತಿಕೆ ಹಣ | ಸಾಲದ ಅವಧಿ | ಬಡ್ಡಿದರ | ಮಾಸಿಕ ಕಂತು | ಪಾವತಿಸಬೇಕಾದ ಒಟ್ಟು ಬಡ್ಡಿಯ ಮೊತ್ತ |
|---|---|---|---|---|
| 1,50,000 | 5 ವರ್ಷ | 10% | 3187.06 | 41223.60 |
| | 10 ವರ್ಷ | | 1982.26 | 87871.20 |
| | 15 ವರ್ಷ | | 1611.91 | 140143.80 |

ಈ ಯೋಜನೆಯಲ್ಲಿ ಫಲಾನುಭವಿ ಮಾಸಿಕ ಸಾಲದ ಕಂತುಗಳೊಂದಿಗೆ ವಿಮಾ ಕಂತುಗಳನ್ನು ಪಾವತಿಸಬೇಕಾಗುತ್ತದೆ. ಒಂದುವೇಳೆ, ಫಲಾನುಭವಿ ಸಾಲದ ಮರುಪಾವತಿ ಅವಧಿಯಲ್ಲಿ ಆಕಸ್ಮಿಕ ಮರಣ ಹೊಂದಿದಲ್ಲಿ, ವೈಯಕ್ತಿಕ ವಿಮಾ ಯೋಜನೆಯಿಂದ ಉಳಿದ ಕಂತುಗಳ ಮೊತ್ತವನ್ನು ವಿಮಾ ಕಂಪನಿಯು ಬ್ಯಾಂಕ್‌ಗೆ ಸಂದಾಯ ಮಾಡುವುದರಿಂದ ಫಲಾನುಭವಿಯ ವಾರಸುದಾರರು ಬಾಕಿ ಉಳಿದ ಕಂತುಗಳನ್ನು ಪಾವತಿಸುವ ಅಗತ್ಯವಿರುವುದಿಲ್ಲ. ಈ ಕುರಿತಂತೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆ ವಿಮಾ ಯೋಜನೆಯನ್ನು ಜಾರಿಗೊಳಿಸಲು ಕ್ರಮವಹಿಸತಕ್ಕದ್ದು.

**(6) ಸಾಮೂಹಿಕ ಮನೆಗಳ ಫಲಾನುಭವಿಗಳು ನೀರು, ವಿದ್ಯುತ್ ಬಿಲ್ ಪಾವತಿಸುವ ವ್ಯವಸ್ಥೆ :-**

ಪೌರಕಾರ್ಮಿಕರಿಗೆ (G+3) ಸಾಮೂಹಿಕ ವಸತಿ ಗೃಹಗಳನ್ನು ನಿರ್ಮಾಣ ಮಾಡಿ ಹಂಚಿಕೆ ಮಾಡಲಾದಂತಹ ಸಂದರ್ಭದಲ್ಲಿ, ವಸತಿ ಗೃಹಗಳೊಂದಿಗೆ ಸಾಮೂಹಿಕವಾಗಿ ಉಪಯೋಗಿಸುವ ಮೆಟ್ಟಿಲು, ವರಾಂಡಗಳ ಮತ್ತು ವರಾಂಡಗಳಲ್ಲಿ ಉಪಯೋಗಿಸುವ ವಿದ್ಯುಚ್ಛಕ್ತಿ, ಸದರಿ ಮನೆಗಳಿಗೆ ಒದಗಿಸುವ ನೀರು ಸರಬರಾಜು, ಮುಂತಾದವುಗಳ ವೆಚ್ಚವನ್ನು ಭರಿಸುವ ಸಲುವಾಗಿ ವಸತಿಗೃಹದ ವಾಸಿಗಳೇ ತಮ್ಮಲ್ಲಿ ಸಂಘಗಳನ್ನು ರಚಿಸಿಕೊಂಡು ತಗಲುವ ವೆಚ್ಚವನ್ನು ಹಂಚಿಕೊಳ್ಳುವುದು. ವಸತಿ ಗೃಹಗಳು ದುರಸ್ಥಿಗೆ ಬಂದಂತಹ ಸಂದರ್ಭದಲ್ಲಿ ಸದರಿ ಮನೆಗಳ ಉಸ್ತುವಾರಿ ಮತ್ತು ದುರಸ್ಥಿಯನ್ನು ಮನೆಗಳ ಮಾಲೀಕರೇ ತಮ್ಮ ಸ್ವಂತ ವೆಚ್ಚದಿಂದ ಅಥವಾ ಸಾಮೂಹಿಕವಾಗಿ ಭರಿಸುವುದು. ಈ ಯೋಜನೆಯಲ್ಲಿ ಉದ್ದೇಶಿಸಿರುವ ವಸತಿಗಳು ಬಹುಮಹಡಿ ಕಟ್ಟಡಗಳಾಗಿದ್ದು, ಪ್ರತಿಯೊಬ್ಬರು ಪರಸ್ಪರ ಸಹಕಾರದಿಂದ ಮತ್ತು ಹೊಂದಾಣಿಕೆ ಮಾಡಿಕೊಂಡು ಸಹ ಜೀವನ ನಡೆಸತಕ್ಕದ್ದು. ಈ ಸಂಬಂಧ ವಸತಿಗೃಹ ವಾಸಿಗಳು The Karnataka Ownership of Apartment Act-1972 ಪ್ರಕಾರ ಸಂಘಗಳನ್ನು ರಚಿಸಿಕೊಂಡು, ಉಸ್ತುವಾರಿಯ ಖರ್ಚು-ವೆಚ್ಚಗಳನ್ನು ಹಂಚಿಕೊಳ್ಳಬಹುದಾಗಿದೆ. ಈ ಉದ್ದೇಶದ ಸಾಧನೆಗಾಗಿ ಪ್ರಾರಂಭದಲ್ಲಿ ಸಂಘಟಿಸಲು ಲೆಕ್ಕ ಪತ್ರಗಳನ್ನಿಡಲು ಮತ್ತು ಸಂಘದ ಚಟುವಟಿಕೆಗಳನ್ನು ನಿರ್ವಹಿಸಲು ಸೂಕ್ತ ತರಬೇತಿ ನೀಡಲು ನಗರ ಸ್ಥಳೀಯ ಸಂಸ್ಥೆಗಳು ಸಮುದಾಯ ಸಂಘಟಕರ ಸಹಕಾರದಿಂದ ಸಂಘಗಳ ಸ್ಥಾಪನೆಗೆ ಅಗತ್ಯ ನೆರವನ್ನು ನೀಡತಕ್ಕದ್ದು.

**(7) ವಸತಿಗೃಹಗಳ ಪರಭಾರೆ / ಮಾರಾಟಕ್ಕೆ ನಿರ್ಬಂಧ :**

ಪೌರಕಾರ್ಮಿಕನ ಹಾಗೂ ಆತನ ಕುಟುಂಬದ ಹಿತದೃಷ್ಟಿಯಿಂದ ಸರ್ಕಾರವು ಖಾಯಂ ಪೌರಕಾರ್ಮಿಕರಿಗೆ ರೂ.7.50 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಿ ನೀಡುವ ವಸತಿಗೃಹಗಳನ್ನು ಪರಭಾರೆ / ಮಾರಾಟ ಮಾಡದಂತೆ ನಿರ್ಬಂಧಿಸಲು ಉದ್ದೇಶಿಸಿ, ವಸತಿ ಗೃಹ ಸ್ವಾಧೀನಕ್ಕೆ ಪಡೆದ ತರುವಾಯ ಕನಿಷ್ಠ 30 ವರ್ಷಗಳವರೆಗೆ ಸದರಿ ವಸತಿಗೃಹಗಳನ್ನು ಪರಭಾರೆ ಮಾಡದಂತೆ ನಿರ್ಬಂಧ ವಿಧಿಸಲು, ಸದರಿ ವಸತಿಗೃಹವನ್ನು 30 ವರ್ಷಗಳ ಅವಧಿಗೆ ಸರ್ಕಾರದ ಹೆಸರಿನಲ್ಲಿ

ಭೋಗ್ಯ (mortgage) ಕೊಡಿಸಲಾಗುವುದು. ಅದರೊಂದಿಗೆ 20% ಸಾಲ ಪಡೆಯಲು ಬ್ಯಾಂಕ್‌ಗಳು ಸಹ ಭೋಗ್ಯ ಮಾಡಿಸಿ ಕೊಡಲು ಅನುಮತಿ ನೀಡಲಾಗುವುದು.

**(8) ಫಲಾನುಭವಿಗಳ ಆಯ್ಕೆ ಯೋಜನೆ ಅನುಷ್ಠಾನ ಮತ್ತು ಮೇಲ್ವಿಚಾರಣೆ :-**

"ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ"ಗೆ ಫಲಾನುಭವಿಗಳ ಆಯ್ಕೆ, ಯೋಜನೆ ಅನುಷ್ಠಾನ ಮತ್ತು ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ಸಮಿತಿಗಳನ್ನು ರಚಿಸಲಾಗಿದೆ:-

| ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
|---|---|
| ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷ / ಉಪಾಧ್ಯಕ್ಷ | ಸದಸ್ಯರು |
| ಆಯುಕ್ತರು/ ಮುಖ್ಯಾಧಿಕಾರಿಗಳು | ಸದಸ್ಯರು |
| ನಗರ ಸ್ಥಳೀಯ ಸಂಸ್ಥೆಯ ಅಧೀಕ್ಷಕ ಕಾರ್ಯಪಾಲಕ / ಅಭಿಯಂತರರು | ಸದಸ್ಯರು |
| ಜಿಲ್ಲಾ ಸಮಾಜ ಕಲ್ಯಾಣಧಿಕಾರಿಗಳು | ಸದಸ್ಯರು |
| ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರು | ಸದಸ್ಯರು |
| ಯೋಜನಾ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

**(9) ಮೇಲ್ಕಂಡ ಸಮಿತಿಯು ನಿರ್ವಹಿಸಬೇಕಾದ ಅಧಿಕಾರ ಮತ್ತು ಕರ್ತವ್ಯಗಳು :-**

1. ಸರ್ಕಾರದ ಮಾರ್ಗಸೂಚಿಗಳಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವುದು.
2. ನಗರ ಸ್ಥಳೀಯ ಸಂಸ್ಥೆಗಳಿಂದ ಸ್ವೀಕೃತವಾಗುವ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸಿ, ಅಂತಿಮಗೊಳಿಸುವುದು ಹಾಗೂ ಪೌರಾಡಳಿತ ನಿರ್ದೇಶನಾಲಯಕ್ಕೆ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.
3. ಸರ್ಕಾರ ಅನುಮೋದನೆ ನೀಡಿದ ಅರ್ಹ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ಹಾಗೂ ಕಾಮಗಾರಿ ಆದೇಶ ನೀಡುವುದು.
4. ಯೋಜನೆಯ ಅನುಷ್ಠಾನಕ್ಕೆ ಬೇಕಾಗುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
5. ವಸತಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸುವುದು ಹಾಗೂ ಅನುದಾನಕ್ಕೆ ಪೌರಾಡಳಿತ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು.
6. ಸರ್ಕಾರವು ಕಾಲಕಾಲಕ್ಕೆ ನೀಡುವ ಸೂತ್ತೋಲೆ ಮಾರ್ಗಸೂಚಿಗಳಂತೆ ಯೋಜನೆ ಅನುಷ್ಠಾನಕ್ಕೆ ಕ್ರಮವಹಿಸುವುದು.

**(10) ಪೌರಾಡಳಿತ ನಿರ್ದೇಶನಾಲಯದಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದನೆ ನೀಡಲು ಈ ಕೆಳಕಂಡ ರಾಜ್ಯ ಮಟ್ಟದ ಸಮಿತಿ ರಚಿಸಲಾಗಿದೆ :-**

| | |
|---|---|
| ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ | ಅಧ್ಯಕ್ಷರು |
| ಪೌರಾಡಳಿತ ನಿರ್ದೇಶಕರು | ಸದಸ್ಯರು |
| ಅಧೀಕ್ಷಕ ಅಭಿಯಂತರರು, ಪೌರಾಡಳಿತ | ಸದಸ್ಯರು |

| | |
|---|---|
| ನಿರ್ದೇಶನಾಲಯ | |
| ಅಧೀಕ್ಷಕ ಅಭಿಯಂತರರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| ಜಂಟಿ ನಿರ್ದೇಶಕರು (ಯೋಜನೆ), ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| ಜಂಟಿ ನಿರ್ದೇಶಕರು ಅಭಿವೃದ್ಧಿ, ಪೌರಾಡಳಿತ ನಿರ್ದೇಶನಾಲಯ | ಸದಸ್ಯ ಕಾರ್ಯದರ್ಶಿ |

ಈ ಮೇಲ್ಕಂಡ ಸಮಿತಿಯು ಪೌರಾಡಳಿತ ನಿರ್ದೇಶಕರಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವುದು ಹಾಗೂ ಅನುದಾನ ಬಿಡುಗಡೆಗೆ ಕ್ರಮವಹಿಸುವುದು ಮತ್ತು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬೇಕಾಗುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ಪೌರಾಡಳಿತ ನಿರ್ದೇಶನಾಲಯವು ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ನೋಡಲ್ ಸಂಸ್ಥೆಯಾಗಿದ್ದು, ಪೌರ ಕಾರ್ಮಿಕರ ಗೃಹ ಭಾಗ್ಯ ಯೊಜನೆಯ ಯಶಸ್ವಿ ಅನುಷ್ಠಾನಗೊಳಿಸಲು ಎಲ್ಲಾ ಅಗತ್ಯ ಏರ್ಪಾಡುಗಳನ್ನು ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್ ಭಾಗ್ಯಮ್ಮ)
ಸರ್ಕಾರ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸಂಬಂಧಿಸಿದ ಜಿಲ್ಲಾ ಉಸ್ತುವಾರಿ ಸಚಿವರು (ಜಿಲ್ಲಾಧಿಕಾರಿಗಳ ಮುಖಾಂತರ).
3. ಸಂಬಂಧಿಸಿದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಮಾನ್ಯ ರಾಜ್ಯಸಭಾ / ಲೋಕ ಸಭಾ ಸದಸ್ಯರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
4. ಸಂಬಂಧಿಸಿದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಮಾನ್ಯ ವಿಧಾನಸಭೆ / ವಿಧಾನ ಪರಿಷತ್ ಸದಸ್ಯರುಗಳು (ಜಿಲ್ಲಾಧಿಕಾರಿಗಳ ಮುಖಾಂತರ).
5. ಸಂಬಂಧಿಸಿದ ಮಹಾನಗರಪಾಲಿಕೆಗಳ ಮೇಯರ್ / ಉಪ ಮೇಯರ್
6. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು / ಕಾರ್ಯದರ್ಶಿಯವರು / ಆಪ್ತ ಕಾರ್ಯದರ್ಶಿಯವರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು / ಕಾರ್ಯದರ್ಶಿಯವರು, ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆ / ಆರ್ಥಿಕ ಇಲಾಖೆ / ಯೋಜನಾ ಇಲಾಖೆ / ನಗರಾಭಿವೃದ್ಧಿ ಇಲಾಖೆ.
8. ವ್ಯವಸ್ಥಾಪಕ ನಿರ್ದೇಶಕರ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
9. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
10. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ.

11. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ).
12. ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳು ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
13. ಸಂಬಂಧಪಟ್ಟ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರು ಪೌರಾಡಳಿತ ನಿರ್ದೇಶನಾಲಯದ ಮುಖಾಂತರ.
14. ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
15. ಸರ್ಕಾರದ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ಜಂಟಿ ನಿರ್ದೇಶಕರು (ಯೋಜನೆ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕ, ನಗರಾಭಿವೃದ್ಧಿ ಇಲಾಖೆ.
16. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-3 ಮತ್ತು 9, ವಿಧಾನಸೌಧ, ಬೆಂಗಳೂರು.
17. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.